ದಿನಾಂಕ 26.10.2024 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 3 ಮತ್ತು 6ನೇ ಪ್ರತಿವಾದಿಗಳ ವಾರಸುದಾರರ ಪರ ಹಾಗೂ 2 ಮತ್ತು 5ನೇ ಪ್ರತಿವಾದಿಗಳ ಪರ ಶ್ರೀ ಕೆ.ಎಂ.ಜೆ., ವಕೀಲರಿಂದಃ-

ದಾವಾ ಸ್ವತ್ತುಗಳು ಚಿಕ್ಕದಾಸೇಗೌಡರಿಗೆ ಹೇಗೆ ಬಂದವು ಎಂದರೆ ಸಾಕ್ಷಿಯು ಅವರ ಸ್ವಯಾರ್ಜಿತ ಆಸ್ತಿಗಳು ಎಂದು ನುಡಿಯುತ್ತಾರೆ. ಎಲ್ಲಾ ದಾವಾ ಸ್ವತ್ತುಗಳು ಅವರ ಸ್ವಯಾರ್ಜಿತ ಆಸ್ತಿಗಳು. ಚಿಕ್ಕದಾಸೇಗೌಡರು ಖರೀದಿ ಮಾಡಿರುವ ಆಸ್ತಿಗಳ ಕ್ರಯಪತ್ರಗಳನ್ನು ಹಾಜರುಪಡಿಸಿಲ್ಲ. ಎಲ್ಲಾ ದಾವಾ ಸ್ವತ್ತುಗಳು ಚಿಕ್ಕದಾಸೇಗೌಡರ ಹೆಸರಿನಲ್ಲಿವೆ ಎಂದು ತೋರಿಸಲು ಪಹಣಿಗಳನ್ನು ಹಾಜರುಪಡಿಸಿದ್ದೇನೆ. ದಾವಾ ಸ್ವತ್ತುಗಳು ನಾನು ಹೇಳುವಂತೆ ಚಿಕ್ಕದಾಸೇಗೌಡರ ಸ್ವಯಾರ್ಜಿತ ಆಸ್ತಿಗಳಲ್ಲ ಎಂದರೆ ಸರಿಯಲ್ಲ. ಯಾವುದೇ ದಾವಾ ಸ್ವತ್ತುಗಳು ಚಿಕ್ಕದಾಸೇಗೌಡರು ಖರೀದಿ ಮಾಡಿರುವ ಆಸ್ತಿಗಳಲ್ಲ ಎಂದರೆ ಸರಿಯಲ್ಲ.

2. ಹೊಸೂರು ಗ್ರಾಮದ ಸರ್ವೇ ನಂ.109/4 ರಲ್ಲಿ 2 ಎಕರೆ 39 ಗುಂಟೆ, ಸರ್ವೇ ನಂ.111/7 ರಲ್ಲಿ 1 ಎಕರೆ 8 ಗುಂಟೆ, ಸರ್ವೇ ನಂ.96/3 ರಲ್ಲಿ 1 ಗುಂಟೆ, ಸರ್ವೇ ನಂ.106/6 ರಲ್ಲಿ 30 ಗುಂಟೆ, ಸರ್ವೇ ನಂ.110/3 ರಲ್ಲಿ 33 ಗುಂಟೆ, ಸರ್ವೇ ನಂ.112/2 ರಲ್ಲಿ 27 ಗುಂಟೆ, ಸರ್ವೇ ನಂ.120/4 ರಲ್ಲಿ 9 ಗುಂಟೆ, ಸರ್ವೇ ನಂ.136/8 ರಲ್ಲಿ 7 ಗುಂಟೆ, ಸರ್ವೇ ನಂ.230/3 ರಲ್ಲಿ 22 ಗುಂಟೆ, ಸರ್ವೇ ನಂ.330 ರಲ್ಲಿ 3 ಎಕರೆ 30 ಗುಂಟೆ, ಸರ್ವೇ ನಂ.341 ರಲ್ಲಿ 4 ಎಕರೆ 22 ಗುಂಟೆ, ಸರ್ವೇ ನಂ.236 ರಲ್ಲಿ 2 ಎಕರೆ 37 ಗುಂಟೆ, ಸರ್ವೇ ನಂ.399 ರಲ್ಲಿ 2 ಎಕರೆ 20 ಗುಂಟೆ, ಸರ್ವೇ

ನಂ.96/5 ರಲ್ಲಿ 1 ಎಕರೆ, ಸರ್ವೇ ನಂ.136/7 ರಲ್ಲಿ 7 ಗುಂಟೆ ಚಿಕ್ಕದಾಸೇಗೌಡರ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ.

3. ಕನಕಪುರ ತಾಲ್ಲೂಕು, ವಡೇರಹಳ್ಳಿ ಗ್ರಾಮದ ಸರ್ವೇ ನಂ.36/2 ರಲ್ಲಿ 5 ಎಕರೆ 7 ಗುಂಟೆ, ಸರ್ವೇ ನಂ.40 ರಲ್ಲಿ 30 ಗುಂಟೆ, ಸರ್ವೇ ನಂ.34 ರಲ್ಲಿ 50 ಗುಂಟೆ, ಸರ್ವೇ ನಂ.35/2 ರಲ್ಲಿ 30 ಗುಂಟೆ, ಸರ್ವೇ ನಂ.34/12 ರಲ್ಲಿ 20 ಗುಂಟೆ, ಸರ್ವೇ ನಂ.40/1 ರಲ್ಲಿ 2 ಎಕರೆ 3 ಗುಂಟೆ ಚಿಕ್ಕದಾಸೇಗೌಡರ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ಇನ್ನೂ ಆಸ್ತಿಗಳಿವೆ ಎಂದು ಸಾಕ್ಷಿಯು ನುಡಿಯುತ್ತಾರೆ. ಮೇಲೆ ಹೇಳಿದ ಆಸ್ತಿಗಳನ್ನು ಬಿಟ್ಟು ಚಿಕ್ಕದಾಸೇಗೌಡರಿಗೆ ಬೇರೆ ಆಸ್ತಿಗಳು ಇರಲಿಲ್ಲ ಎಂದರೆ ಸರಿಯಲ್ಲ. ಚಿಕ್ಕದಾಸೇಗೌಡರು ಸ್ವಯಾರ್ಜಿತವಾಗಿ ಯಾವುದೇ ಆಸ್ತಿಗಳನ್ನು ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ.

4. ತಹಶೀಲ್ದಾರ್ ರವರಿಂದ ವಂಶವೃಕ್ಷವನ್ನು ಪಡೆದು ಹಾಜರುಪಡಿಸಿಲ್ಲ, ಆದರೆ ಹಾಜರುಪಡಿಸಬಲ್ಲೆ. ಚಿಕ್ಕದಾಸೇಗೌಡರಿಗೆ ಒಟ್ಟು ನಾಲ್ಕು ಜನ ಮಕ್ಕಳು ಎಂದರೆ ಸರಿ. ಅಂದರೆ ಇಬ್ಬರು ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು. ನಿಪಿ-1 ವಂಶವೃಕ್ಷದಲ್ಲಿ ಚಿಕ್ಕದಾಸೇಗೌಡರ ಹೆಣ್ಣು ಮಕ್ಕಳನ್ನು ಸೇರಿಸಿಲ್ಲ ಎಂದರೆ ಸರಿ. ತಿಮ್ಮಮ್ಮ ಮತ್ತು ಭದ್ರಮ್ಮ ಚಿಕ್ಕದಾಸೇಗೌಡರ ಹೆಣ್ಣು ಮಕ್ಕಳು ಎಂದರೆ ಸರಿ. ತಿಮ್ಮಮ್ಮ ತೀರಿಕೊಂಡಿದ್ದು ಅವರಿಗೆ ನಾಲ್ಕು ಜನ ಮಕ್ಕಳಿದ್ದಾರೆ ಎಂದರೆ ಸರಿ. ಅವರೆಂದರೆ ಪುಟ್ಟವೀರಯ್ಯ, ಹೊನ್ನಪ್ಪ, ಹುಚ್ಚೀರಯ್ಯ, ಕೆಂಪಮ್ಮ ಎಂದರೆ ಸರಿ. ಪುಟ್ಟವೀರಯ್ಯ ತೀರಿಕೊಂಡಿದ್ದಾರೆ ಎಂದರೆ ಸರಿ. ಪುಟ್ಟವೀರಯ್ಯನಿಗೆ ನಾಗೇಶ್ ಮಗ ಎಂದರೆ ಸರಿ. ನಾಗೇಶ್‌ರವರು

ತೀರಿಕೊಂಡಿದ್ದಾರೆ ಎಂದರೆ ಸರಿ. ಅವರ ಪತ್ನಿ ಸುಶೀಲಾ ಜೀವಂತ ಇದ್ದಾರೆ. ಅವರ ಮಗಳು ಶ್ವೇತಾ ಜೀವಂತ ಇದ್ದಾರೆ. ಅವರನ್ನು ಪಾರ್ಟಿಯಾಗಿ ಮಾಡಿಲ್ಲ.

5. ಹೊನ್ನಪ್ಪನಿಗೆ ಮೂರು ಜನ ಹೆಣ್ಣು ಮಕ್ಕಳು ಹಾಗೂ ಒಬ್ಬ ಗಂಡು ಮಗ ಇದ್ದಾರೆ ಎಂದರೆ ಸರಿ. ಅವರನ್ನು ಸಹ ಈ ಕೇಸಿನಲ್ಲಿ ಪಾರ್ಟಿಯಾಗಿ ಮಾಡಿಲ್ಲ ಎಂದರೆ ಸರಿ. ಕೆಂಪಮ್ಮನಿಗೆ ಶಿವರಾಜು ಮತ್ತು ಕರಿಯಪ್ಪ ಎಂಬ ಮಕ್ಕಳಿದ್ದಾರೆ ಎಂದರೆ ಸರಿ. ಅವರನ್ನು ಈ ಕೇಸಿನಲ್ಲಿ ಪಾರ್ಟಿಯಾಗಿ ಮಾಡಿಲ್ಲ ಎಂದರೆ ಸರಿ. ಭದ್ರಮ್ಮನಿಗೆ ಕೆಂಪಮ್ಮ, ಪಾರ್ವತಮ್ಮ ಮತ್ತು ನಿಂಗಪ್ಪ ಎಂಬ ಮಕ್ಕಳಿದ್ದಾರೆ ಎಂದರೆ ಸರಿ. ಕೆಂಪಮ್ಮನಿಗೆ ತಿಮ್ಮರಾಜು ಮತ್ತು ಕರಿಯಪ್ಪ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಅವರನ್ನು ಈ ಕೇಸಿನಲ್ಲಿ ಪಾರ್ಟಿಯಾಗಿ ಮಾಡಿಲ್ಲ ಎಂದರೆ ಸರಿ. ಪಾರ್ವತಮ್ಮನಿಗೆ ಕುಮಾರ, ಚಲುವರಾಜು ಮತ್ತು ದಾಸಪ್ಪ ಎಂಬ ಮಕ್ಕಳಿದ್ದಾರೆ ಎಂದರೆ ಸರಿ. ಅವರನ್ನು ಈ ಕೇಸಿನಲ್ಲಿ ಪಾರ್ಟಿಯಾಗಿ ಮಾಡಿಲ್ಲ ಎಂದರೆ ಸರಿ. ನಿಂಗಪ್ಪನಿಗೆ ಜಯರಾಮಯ್ಯ, ಸುರೇಶ ಮತ್ತು ನಾಗರಾಜು ಎಂಬ ಮಕ್ಕಳಿದ್ದಾರೆ ಎಂದರೆ ಸರಿ. ಅವರನ್ನು ಈ ಕೇಸಿನಲ್ಲಿ ಪಾರ್ಟಿಯಾಗಿ ಮಾಡಿಲ್ಲ ಎಂದರೆ ಸರಿ.

6. ದಾಸಪ್ಪನಿಗೆ ಪಾರ್ವತಮ್ಮ ಮತ್ತು ನಂಜಮ್ಮ ಎಂಬ ಇಬ್ಬರು ಹೆಂಡತಿಯರು ಎಂದರೆ ಸರಿ. ನಿಪಿ-1 ವಂಶವೃಕ್ಷದಲ್ಲಿ ದಾಸಪ್ಪನ ಪತ್ನಿ ಪಾರ್ವತಮ್ಮನ ಬದಲಿಗೆ ಲಕ್ಷ್ಮಮ್ಮ ಎಂದು ಬರೆಸಿದ್ದೇವೆ ಎಂದರೆ ಸರಿ. ಚಲುವೇಗೌಡ ಮತ್ತು ದಾಸೇಗೌಡರು ಮೇಲೆ ಹೇಳಿದ ಚಿಕ್ಕದಾಸೇಗೌಡರ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ

ಸರಿಯಲ್ಲ. ಸಾಕ್ಷಿಯು ಮುಂದುವರೆದು ಚಲುವೇಗೌಡರಿಗೆ ಮಾತ್ರ 60 ಎಕರೆ ಬಂದಿದೆ ಎಂದು ನುಡಿಯುತ್ತಾರೆ. ಚಲುವೇಗೌಡ ಮತ್ತು ದಾಸೇಗೌಡರು ವಿಭಾಗ ಮಾಡಿಕೊಂಡಿದ್ದು ವಿಭಾಗದಂತೆ ಅವರವರ ಹೆಸರಿಗೆ ಖಾತೆ ಬಂದಿದೆ ಎಂದರೆ ಸಾಕ್ಷಿಯು 1983-84 ರಲ್ಲಿ ಚಲುವೇಗೌಡ ಮತ್ತು ದಾಸೇಗೌಡರಿಗೆ ಅರ್ಧ ಹಿಸ್ಸೆಯಂತೆ ಖಾತೆ ಬಂದಿರುವುದು ಎಂದು ನುಡಿಯುತ್ತಾರೆ. 1950 ರಲ್ಲೇ ಬಾಯಿಮಾತಿನಲ್ಲಿ ಚಲುವೇಗೌಡರು ಮತ್ತು ದಾಸೇಗೌಡರು ಭಾಗ ಮಾಡಿಕೊಂಡಿದ್ದು ಅವರವರ ಭಾಗದ ಆಸ್ತಿಗಳನ್ನು ಅನುಭವಿಸುತ್ತಾ ಬಂದಿದ್ದಾರೆ ಎಂದರೆ ಸರಿಯಲ್ಲ.

7. ಚಲುವೇಗೌಡರಿಗೆ ಹೊಸೂರು ಗ್ರಾಮದ ಸರ್ವೇ ನಂ.109/4 ರಲ್ಲಿ 1 ಎಕರೆ 19.5 ಗುಂಟೆ, ಸರ್ವೇ ನಂ.111/7 ರಲ್ಲಿ 24 ಗುಂಟೆ, ಸರ್ವೇ ನಂ.106/6 ರಲ್ಲಿ 15 ಗುಂಟೆ, ಸರ್ವೇ ನಂ.101/8 ರಲ್ಲಿ 3.5 ಗುಂಟೆ, ಸರ್ವೇ ನಂ.110/3 ರಲ್ಲಿ ಹದಿನಾರುವರೆ ಗುಂಟೆ, ಸರ್ವೇ ನಂ.112/2 ರಲ್ಲಿ 13.5 ಗುಂಟೆ, ಸರ್ವೇ ನಂ.120/4 ರಲ್ಲಿ ನಾಲ್ಕೂವರೆ ಗುಂಟೆ, ಸರ್ವೇ ನಂ.136/8 ರಲ್ಲಿ 3 ಗುಂಟೆ, ಸರ್ವೇ ನಂ.230/3 ರಲ್ಲಿ 11 ಗುಂಟೆ, ಸರ್ವೇ ನಂ.330 ರಲ್ಲಿ 1 ಎಕರೆ 39.5 ಗುಂಟೆ, ಸರ್ವೇ ನಂ.341 ರಲ್ಲಿ 2 ಎಕರೆ 11 ಗುಂಟೆ, ಸರ್ವೇ ನಂ.236 ರಲ್ಲಿ 1 ಎಕರೆ 18.5 ಗುಂಟೆ, ಸರ್ವೇ ನಂ.399 ರಲ್ಲಿ 1 ಎಕರೆ 10 ಗುಂಟೆ, ಸರ್ವೇ ನಂ.96/5 ರಲ್ಲಿ 20 ಗುಂಟೆ, ಸರ್ವೇ ನಂ.136/7 ರಲ್ಲಿ 35 ಗುಂಟೆ ಹೊಸೂರು ಗ್ರಾಮದ ಆಸ್ತಿಗಳು ಚಲುವೇಗೌಡರಿಗೆ ವಿಭಾಗದಲ್ಲಿ ಬಂದಿವೆ ಎಂದರೆ ಸಾಕ್ಷಿಯು ಸರಿ, ಇನ್ನೂ ಕೆಲವು ಸ್ವತ್ತುಗಳು ಅವರಿಗೆ ಬಂದಿರುವ ಆಸ್ತಿಗಳಿವೆ ಎಂದು ನುಡಿಯುತ್ತಾರೆ.

8. ಕನಕಪುರ ತಾಲ್ಲೂಕನ ವಡೇರಹಳ್ಳಿ ಗ್ರಾಮದ ಸರ್ವೇ ನಂ.36/2 ರಲ್ಲಿ 2 ಎಕರೆ 23/5 ಗುಂಟೆ ಸರ್ವೇ ನಂ.40 ರಲ್ಲಿ 15 ಗುಂಟೆ, ಸರ್ವೇ ನಂ.34/1 ರಲ್ಲಿ 25 ಗುಂಟೆ, ಸರ್ವೇ ನಂ.40/1 ರಲ್ಲಿ 1 ಎಕರೆ ಒಂದೂವರೆ ಗುಂಟೆ, ಸರ್ವೇ ನಂ.34/2 ರಲ್ಲಿ 10 ಗುಂಟೆ ಚಲುವೇಗೌಡರ ವಿಭಾಗದಲ್ಲಿ ಬಂದಿವೆ ಎಂದರೆ ಸಾಕ್ಷಿಯು ಸರಿ, ಇನ್ನೂ ಕೆಲವು ಆಸ್ತಿಗಳು ಅವರ ಭಾಗಕ್ಕೆ ಬಂದಿವೆ ಎಂದು ನುಡಿಯುತ್ತಾರೆ. ಇಷ್ಟೇ ವಿಸ್ತೀರ್ಣದ ಆಸ್ತಿಗಳು ದಾಸೇಗೌಡರ ಭಾಗಕ್ಕೆ ಬಂದಿವೆ ಎಂದರೆ ಸಾಕ್ಷಿಯು ಬಂದಿರುವುದು ನಿಜ, ಆದರೆ ಇನ್ನೂ 50 ಸರ್ವೇ ನಂಬರ್‌ಗಳು ಚಿಕ್ಕದಾಸೇಗೌಡರ ಹೆಸರಿನಲ್ಲಿದ್ದವು ಅವುಗಳನ್ನು 2000 ನೇ ಇಸವಿಯಲ್ಲಿ ಚಲುವೇಗೌಡರ ವಂಶಸ್ಥರು ಚನ್ನಪ್ಪರನ್ನು ಬಿಟ್ಟು ಕರೇದಾಸೇಗೌಡರ ವಂಶಸ್ಥರು, ಮಕ್ಕಳು, ಮೊಮ್ಮಕ್ಕಳು ವಿಭಾಗ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

9. ಚಲುವೇಗೌಡರ ಭಾಗಕ್ಕೆ ಬಂದ ಆಸ್ತಿಗಳನ್ನು ಅವರ ಮೂರು ಜನ ಗಂಡು ಮಕ್ಕಳಾದ ಚಲುವಯ್ಯ, ದಾಸಪ್ಪ ಅಲಿಯಾಸ್ ಬೋಡದಾಸಪ್ಪ ಮತ್ತು ಚನ್ನಪ್ಪರವರು 1960 ರಲ್ಲೇ ಮೌಖಿಕ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ವಿಭಾಗದಲ್ಲಿ ಚಲುವೇಗೌಡರ ಮಗ ಚಲುವಯ್ಯನಿಗೆ ಸರ್ವೇ ನಂ.110/3 ರಲ್ಲಿ 11 ಗುಂಟೆ, ಸರ್ವೇ ನಂ.96/5 ರಲ್ಲಿ 13 ಗುಂಟೆ, ಸರ್ವೇ ನಂ.106/6 ರಲ್ಲಿ 5 ಗುಂಟೆ, ಸರ್ವೇ ನಂ.120/4 ರಲ್ಲಿ 2 ಗುಂಟೆ, ಸರ್ವೇ ನಂ.112 ರಲ್ಲಿ 13 ಗುಂಟೆ, ಸರ್ವೇ ನಂ.399 ರಲ್ಲಿ 30 ಗುಂಟೆ, ಸರ್ವೇ ನಂ.136/8 ರಲ್ಲಿ 1 ಗುಂಟೆ, ಸರ್ವೇ ನಂ.236 ರಲ್ಲಿ 20 ಗುಂಟೆ, ಸರ್ವೇ ನಂ.330 ರಲ್ಲಿ 30 ಗುಂಟೆ, ಸರ್ವೇ ನಂ.340 ರಲ್ಲಿ 20 ಗುಂಟೆ ಹೊಸೂರು ಗ್ರಾಮದ ಆಸ್ತಿಗಳು ಹಾಗೂ

ಸರ್ವೇ ನಂ.32/2 ರಲ್ಲಿ ಆರೂವರೆ ಗುಂಟೆ, ಸರ್ವೇ ನಂ.34/5 ರಲ್ಲಿ 35 ಗುಂಟೆ, ಸರ್ವೇ ನಂ.36/2 ರಲ್ಲಿ 1 ಎಕರೆ 11 ಗುಂಟೆ, ಸರ್ವೇ ನಂ.40/5 ರಲ್ಲಿ 5 ಗುಂಟೆ ವಡೇರಹಳ್ಳಿ ಗ್ರಾಮದ ಆಸ್ತಿಗಳು ವಿಭಾಗದಲ್ಲಿ ಬಂದಿವೆ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ.

10. ದಾಸಪ್ಪ ಅಲಿಯಾಸ್ ಬೋಡದಾಸಪ್ಪನಿಗೆ ಸರ್ವೇ ನಂ.399 ರಲ್ಲಿ 2 ಎಕರೆ 10 ಗುಂಟೆ, ಸರ್ವೇ ನಂ.110/3 ರಲ್ಲಿ 11 ಗುಂಟೆ, ಸರ್ವೇ ನಂ.106/6 ರಲ್ಲಿ 5 ಗುಂಟೆ, ಸರ್ವೇ ನಂ.236 ರಲ್ಲಿ 19 ಗುಂಟೆ, ಸರ್ವೇ ನಂ.96/5 ರಲ್ಲಿ ಹದಿಮೂರೂವರೆ ಗುಂಟೆ, ಸರ್ವೇ ನಂ.120/4 ರಲ್ಲಿ 1 ಗುಂಟೆ, ಸರ್ವೇ ನಂ.330 ರಲ್ಲಿ 30 ಗುಂಟೆ, ಸರ್ವೇ ನಂ.328 ರಲ್ಲಿ 30 ಗುಂಟೆ, ಸರ್ವೇ ನಂ.111/7 ರಲ್ಲಿ 11 ಗುಂಟೆ, ಸರ್ವೇ ನಂ.109/4 ರಲ್ಲಿ 15 ಗುಂಟೆ ಹೊಸೂರು ಗ್ರಾಮದ ಆಸ್ತಿಗಳು ಹಾಗೂ ಸರ್ವೇ ನಂ.40/5 ರಲ್ಲಿ 5 ಗುಂಟೆ, ಸರ್ವೇ ನಂ.31/2 ರಲ್ಲಿ ನಾಲ್ಕೂವರೆ ಗುಂಟೆ, ಸರ್ವೇ ನಂ.37/2 ರಲ್ಲಿ 6 ಗುಂಟೆ, ಸರ್ವೇ ನಂ.35/1 ರಲ್ಲಿ 10 ಗುಂಟೆ ವಡೇರಹಳ್ಳಿ ಗ್ರಾಮದ ಆಸ್ತಿಗಳು ವಿಭಾಗದಲ್ಲಿ ಬಂದಿವೆ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ.

11. ನನ್ನ ತಂದೆ ಚನ್ನಪ್ಪನಿಗೆ ಖಾನೇಷುಮಾರಿ ನಂ.61, ಹೊಸ ನಂ.94/61 ಎ 22*25 ಅಡಿ 10 ಅಂಕಣ ಮನೆ, ಸರ್ವೇ ನಂ.109/4 ರಲ್ಲಿ 15 ಗುಂಟೆ, ಸರ್ವೇ ನಂ.111/7 ರಲ್ಲಿ 15 ಗುಂಟೆ, ಸರ್ವೇ ನಂ.328 ರಲ್ಲಿ 33 ಗುಂಟೆ, ಸರ್ವೇ ನಂ.410 ರಲ್ಲಿ 20 ಗುಂಟೆ, ಸರ್ವೇ ನಂ.399 ರಲ್ಲಿ 20 ಗುಂಟೆ, ಸರ್ವೇ ನಂ.341 ರಲ್ಲಿ 30 ಗುಂಟೆ, ಸರ್ವೇ ನಂ.230/3 ರಲ್ಲಿ 6 ಗುಂಟೆ, ಸರ್ವೇ ನಂ.55 ರಲ್ಲಿ ಪೂರ್ವ ಪಶ್ಚಿಮ 5 ಗಜ, ಉತ್ತರ ದಕ್ಷಿಣ

10 ಗಜ, ಸರ್ವೇ ನಂ.120/4 ರಲ್ಲಿ 2 ಗುಂಟೆ, ಸರ್ವೇ ನಂ.236 ರಲ್ಲಿ 34 ಗುಂಟೆ, ಸರ್ವೇ ನಂ.136/8 ರಲ್ಲಿ 1 ಗುಂಟೆ, ಸರ್ವೇ ನಂ.110/3 ರಲ್ಲಿ 15 ಗುಂಟೆ, ಸರ್ವೇ ನಂ.106/6 ರಲ್ಲಿ 5 ಗುಂಟೆ, ಸರ್ವೇ ನಂ.96/5 ರಲ್ಲಿ ಹದಿಮೂರೂವರೆ ಗುಂಟೆ ಹೊಸೂರು ಗ್ರಾಮದ ಆಸ್ತಿಗಳು ಹಾಗೂ ಸರ್ವೇ ನಂ.34/1 ರಲ್ಲಿ 16 ಗುಂಟೆ, ಸರ್ವೇ ನಂ.34/5 ರಲ್ಲಿ ಹತ್ತು ಮುಕ್ಕಾಲು ಗುಂಟೆ, ಸರ್ವೇ ನಂ.40/1 ರಲ್ಲಿ 1 ಎಕರೆ ಅರ್ಧ ಗುಂಟೆ, ಸರ್ವೇ ನಂ.35/2 ರಲ್ಲಿ 30 ಗುಂಟೆ, ಸರ್ವೇ ನಂ.40/5 ರಲ್ಲಿ 6 ಗುಂಟೆ ವಡೇರಹಳ್ಳಿ ಗ್ರಾಮದ ಆಸ್ತಿಗಳು ವಿಭಾಗದಲ್ಲಿ ಬಂದಿವೆ ಎಂದರೆ ಸಾಕ್ಷಿಯು ಬಂದಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಅವರ ಭಾಗಕ್ಕೆ ಬಂದಿದ್ದ ಇಷ್ಟೂ ಆಸ್ತಿಗಳನ್ನು ಮಾರಾಟ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಖಾನೇಷುಮಾರಿ ನಂ.61, ಹೊಸ ನಂ.94/61 ಎ ಆಸ್ತಿಯನ್ನು ನನ್ನ ತಂದೆ ಪಾರ್ವತಮ್ಮನಿಗೆ ದಿನಾಂಕ 25.03.1969 ರಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ 2008 ರ ಪ್ರಕರಣದ ವಾದ ವಿವಾದ ಆಲಿಸಲು ಇರುವುದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.